**( ದಿನಾಂಕ.05-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರೆದ ಪಾಟೀ ಸವಾಲುಃ** ಶ್ರೀ.G.V.T ವಕೀಲರಿಂದ

ನನ್ನ ವೇತನದ 180% ರಷ್ಟು ಆಸ್ತಿ ಜಾಸ್ತಿ ಇದೆ ಎಂದು ನನ್ನ ಮೇಲೆ ACB ರವರು ನನ್ನ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂಬರ 22/1 ಕೋಟನೂರು ರಲ್ಲಿ ಪ್ಲಾಟ ನಂಬರ 15 ಹಾಗೂ 6 ಗಳನ್ನು ಹಾಗೂ ಭೂಸನೂರ ಗ್ರಾಮದ ಸರ್ವೇ ನಂಬರ 153/3 ರ 3 ಎಕರೆ 17 ಗುಂಟೆ ಜಮೀನನ್ನು ಹಾಗೂ ಕಲಬುರುಗಿ ನಗರದಲ್ಲಿ ಒಂದು ಮನೆಯನ್ನು ನಾನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಮತ್ತು ನನ್ನ ಹೆಂಡತಿಯ ವೇತನದಿಂದ ಖರೀದಿಸಿರುತ್ತೇವೆ ಎಂದು ನುಡಿಯುತ್ತಾರೆ.

ನಾನು ಆದಾಯ ತೆರಿಗೆ ಇಲಾಖೆಗೆ ಯಾವ್ಯಾವ ವರ್ಷ ಖರೀದಿ ಮಾಡಿರುತ್ತೇನೊ ಆ ವರ್ಷದ ಆದಾಯ ತೆರಿಗೆ Returns ದಲ್ಲಿ ಈ ಬಗ್ಗೆ ತೋರಿಸಿರುತ್ತೇನೆ. ಕಲಬುರುಗಿಯಲ್ಲಿ ಕಟ್ಟಿದ ಮನೆಯನ್ನು ಸಾಲ ಮಾಡಿ ಕಟ್ಟಿಸಿದ್ದು ನಾನು ಅದೇ ವರ್ಷ ಮನೆ ಕಟ್ಟಲು ಸಾಲ ತೆಗೆದುಕೊಂಡಿರುತ್ತೇನೆ.

ಮೇಲೆ ಹೇಳಿದ ಜಮೀನು ಮತ್ತು ಪ್ಲಾಟಗಳನ್ನು ಹಾಗೂ ಕಲಬುರುಗಿ ಮನೆಯನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿದ್ದರೂ ವಾದಿಗೆ

**OS. No.16/2015**

**P.W-1**

ದಾವಾ ಸ್ವತ್ತಿನಲ್ಲಿ ಭಾಗ ನೀಡಬೇಕಾಗುತ್ತದೆ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**